**REPLY STATEMENT OF REGIONAL DIRECTOR (ENVIRONMENT), KARWAR WITH RESPECT TO ORIGINAL APPLICATION 225 OF 2021 BEFORE THE HON'BLE NATIONAL GREEN TRIBUNAL SOUTHERN ZONE, CHENNAI FILED BY SRI. VIDYADHAR DURGEKAR.**

Karwar town is situated on the Arabian Sea coast on western side and on Kali river bank on northern side, so the land area from High Tide Line on landward side along sea front and river front are declared as Coastal Regulation Zone are as per CRZ Notification 2011. It was found that several development activities are taken up in CRZ area which falls in No development zone & CRZ-II zone as per approved Coastal Zone Management Plan (CZMP) as per CRZ Notification 1991 & 2011. The development activities taken up in CRZ area without prior permission from CRZ authorities are inspected and issued notices (Table of notices attached as **Annexure-I**) to the Departments and individuals who are taking up these development activities.

Some of the development activities taken up are listed as below:

1. Construction of Rock Garden Work at sea front has been taken up in CRZ–I&II area by Zilla Nirmithi Kendra, for which approval was given by Dr. Rabindranath Tagore Beach Development Conservation Committee, Karwar without obtaining prior CRZ clearance.
2. Construction of building near the Drive-in Hotel at Karwar beach on sea side which is in CRZ-I and partially in CRZ-II area without obtaining prior CRZ clearance.
3. Branded Food Court Building has been constructed on sea side at Karwar beach in CRZ I & Partially in CRZ-II area by Sri. Rajesh S. Kamath, for which the land has been given on lease by Dr. Rabindranath Tagore Beach Development Conservation Committee, Karwar without obtaining prior CRZ clearance.
4. Construction of Hostel building on Kali river bank at Sy. No. 6 A1A of Chittakula Village which is in NDZ of CRZ area has been taken up by Assistant Director, Youth Empowerment and Sports Department, Karwar without obtaining prior CRZ clearance.
5. Construction of building behind Mayurvarma Vedike and Temporary Fish Market Yard on sea side in CRZ –II area without obtaining prior CRZ clearance.

Sri. Balakrishna S. Pai Advocate, Karwar has given a legal notice on 09.01.2018 complaining that many permanent structures are being constructed on the Karwar beach in violation of CRZ notification.

The subject was placed in the Karnataka State Coastal Zone Management Authority held on 15.02.2018. As per the provisions of CRZ notification prior clearance has to be taken for any activity in CRZ area. Hence the Authority decided to give directions to the Regional Director (Environment) to submit report whether CRZ clearance has been obtained or not.

In compliance to the KSCZMA directions, the detailed report was submitted with respect to the above listed development activities taken up in CRZ area without prior approval from CRZ authorities vide letter dated 03-04-2018 and 26-04-2018 (**Annexure-II)** The report was placed

in KSCZMA meeting held on 27.04.2018. Since all the above activities had been taken up without obtaining CRZ clearance, the Authority considered this as CRZ violation and decided as below:

To issue notices of proposed directions (NPD) under section 5 of Environment (Protection) Act 1986 to the Additional Deputy Commissioner & Member Secretary, Dr. Rabindranath Tagore Beach Development Conservation Committee, Karwar for taking up the works at SL. No. 1,2,3 above in violation of CRZ notification 2011.

1. To issue notices of proposed directions (NPD) under section 5 of Environment (Protection) Act 1986 to the Assistant Director, Youth Empowerment and Sports Department, Karwar for taking up the works at SL. No. 4 above in violation of CRZ notification 2011.
2. To issue notices of proposed directions (NPD) under section 5 of Environment (Protection) Act 1986 to the Commissioner, City Municipal Council, Karwar for taking up the work at SL. No. 5 above in violation of CRZ notification 2011.

As per the decision of the Authority NPD was issued by KSCZMA on 12.06.2018. For the said notice, Additional Deputy Commissioner, Karwar had submitted reply to KSCZMA on 29.06.2018 stating that, only renovation of old existing buildings were taken up and no new construction was carried out.

The matter was placed in the KSCZMA meeting held on 07.03.2019. After going through the reply given by the Additional Deputy Commissioner, the Authority directed the Additional Deputy Commissioner to produce all the necessary documents to prove that the buildings which have been taken up for renovation were existing building prior to 1991.

The Additional Deputy Commissioner, Karwar had replied to KSCZMA on 29.06.2018 and 22.05.2019 enclosing a few documents which were not visible and it was found that there were many discrepancies in the report regarding the purpose of the old structures and the activities being carried out now, for which clarification was sought by KSCZMA vide letter dated 09.09.2020.

However, no clarification has been received from the Additional Deputy Commissioner & Member Secretary, Dr. Rabindranath Tagore Beach Development Conservation Committee Karwar, and no reply from the Assistant Director, Youth Empowerment and Sports Department, Karwar and the Commissioner, City Municipal Council, Karwar for the above said CRZ violations for which NPD was issued on 12.06.2018.

Further as per Hon'ble NGT direction to appoint a joint committee to inspect and report the factual, Regional Director (Environment), Karwar was nominated as member of the joint committee. The joint committee has inspected the area on 27 & 28th of January 2022 and the committee report was submitted to KSCZMA, from Regional Director (Environment) office on 31st January 2022 for submission to the Hon'ble NGT for further decision.

Yours faithfully,

Regional Director (Environment)
Karwar

**Annexure-1**

| S.No | Date of issue of show cause | Department | Details of show cause | Response to show cause, if any |
|---|---|---|---|---|
| 1. | 30-11-2016 | Department of Youth Empowerment & Sports | To get direction under Sec. 5 of E(P) Act 1986 dtd:30-11-2016 | Proposal submitted by the Department of Youth Empowerment & Sports to get NOC. |
| 2 | 12-05-2017 | Sri. Roshan Pinto<br>Proprietor, Leisure Routes<br>Mangalore. | Started work when proposal pending for approval | Started the garden and basic facility like toilet work and requested to speed issue of NOC in letter dtd: 18-05-2017(Proposal submitted in 16-11-2016) |
| 3 | 06-06-2017 | Project Manager,<br>Zilla Nirmiti Kendra,<br>Karwar | Rock Garden work started without CRZ approval | Proposal submitted by Additional DC, Member Secretary, Dr. Ravindranath Tagore Beach Development & Protection Committee on 22-12-2017 to issue CRZ NOC |
| 4 | 19-12-2017 | Sri. Rajesh Kamat (Successful Tenderer) & to Additional DC, Member Secretary, Dr. Ravindranath Tagore Beach Development & Protection Committee | Started the food court construction work | Proposal submitted by Additional DC, Member Secretary, Dr. Ravindranath Tagore Beach Development & Protection Committee on 22-12-2017 to issue CRZ NOC |

| | | | | |
|---|---|---|---|---|
| 5 | 26-9-2017 & 31-10-2017 | Town Municipality, Karwar | Construction of Nelasiri building adjacent to Drive In Hotel started without CRZ approval, so to take action against the violator | No response received from Town Municipality, Karwar.<br>Proposal submitted by Additional DC, Member Secretary, Dr. Ravindranath Tagore Beach Development & Protection Committee on 22-12-2017 to issue CRZ NOC |

Annexure-II

ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಛೇರಿ, (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ) ಪರಿಸರ ಭವನ,ಹಬ್ಬುವಾಡಾ,
ಕಾರವಾರ-581306 ಇ-ಮೇಲ್: rdekwr2010@gmail.com, ದೂರವಾಣಿ/ಫ್ಯಾಕ್ಸ್: 08382-223997

ಪ್ರಾನಿಪ/ಕನಿವ/ನಿ.ಉಲ್ಲಂಘನೆ/2018-19/3 ದಿನಾಂಕ: 3/4 /2018

ಇವರಿಗೆ,

ಸರ್ಕಾರದ ಕಾರ್ಯದರ್ಶಿಗಳು,
(ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬೆಂಗಳೂರು.

ಮಾನ್ಯರೇ,

ವಿಷಯ: ನಾಶವಾಗುತ್ತಿರುವ ಕಾರವಾರ ಕಡಲ ತೀರವನ್ನು ಸಂರಕ್ಷಿಸುವ ಕುರಿತು.

ಉಲ್ಲೇಖ: 1) ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ ಸಭೆ, ದಿನಾಂಕ: 15-02-2018ರ ನಡುವಳಿಯ ನಿರ್ದೇಶನದಂತೆ.
2) ತಮ್ಮ ಕಛೇರಿ ಪತ್ರ ಸಂಖ್ಯೆ:ಅಪಜೀ 06 ಸಿಆರ್‌ಝೆಡ್, ದಿನಾಂಕ:07/09/2017.
3) ಈ ಕಛೇರಿ ನೋಟಿಸ್ ಪತ್ರ ಸಂಖ್ಯೆ:ಪ್ರಾನಿಪ/ಕನಿವ/ನೋಟಿಸ್/2017-18/386 ದಿನಾಂಕ: 06-06-2017.
4) ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ರವರ ಅರ್ಜಿ ದಿನಾಂಕ: 14-07-2017.
5) ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ರವರ ಅರ್ಜಿ ದಿನಾಂಕ: 07-02-2018.
6) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/ಹೋಟೆಲ್ ಉಲ್ಲಂಘನೆ/2017-18/841, ದಿನಾಂಕ:26-9-2017.
7) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/ಹೋಟೆಲ್ ಉಲ್ಲಂಘನೆ/2017-18/929, ದಿನಾಂಕ:31-10-2017.
8) ಈ ಕಛೇರಿ ನೋಟಿಸ್ ಪತ್ರ ಸಂಖ್ಯೆ:ಪ್ರಾನಿಪ/ಕನಿವ/ನಿ. ಉಲ್ಲಂಘನೆ/2017-18/208, ದಿನಾಂಕ: 19-12-2017.
9) ಶ್ರೀ. ರಾಜೇಶ ಎಸ್. ಕಾಮತ್,ಕಾರವಾರ ರವರ ಅರ್ಜಿ ದಿನಾಂಕ: 29-01-2018.
10) ಯುವಜನ ಸೇವಾ ಇಲಾಖೆ, ಕಾರವಾರ ರವರ ಅರ್ಜಿ ದಿನಾಂಕ: 25-01-2016.
11) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/ದಾ.ಪ./2016-17/520,ದಿನಾಂಕ: 30-11-2016.
12) ಯುವಜನ ಸೇವಾ ಇಲಾಖೆ, ಕಾರವಾರ ರವರ ಪತ್ರ ದಿನಾಂಕ:28-12-2017.
13) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/2017-18/286,ದಿನಾಂಕ: 05-1-2018.

ok

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಂತೆ ದಿನಾಂಕ: 15-02-2018 ರಂದು ನಡೆದ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ ಸಭೆಯಲ್ಲಿ ಉಲ್ಲೇಖ ಪತ್ರ(2) ರಲ್ಲಿ ಕಾರವಾರ ಕಡಲ ತೀರದಲ್ಲಿ ಕಾನೂನು ಬಾಹಿರವಾಗಿ ಕಟ್ಟಡಗಳು ನಿರ್ಮಾಣವಾಗಿದ್ದು, ಇದರಿಂದ ನಾಶವಾಗುತ್ತಿರುವ ಕಾರವಾರ ಕಡಲ ತೀರವನ್ನು ಸಂರಕ್ಷಿಸುವಂತೆ ನೀಡಿರುವ ಲೀಗಲ್ ನೋಟಿಸ್ ಪ್ರಕಾರ ಸ್ಥಳ ಪರಿಶೀಲಿಸಿ ವರದಿ ನೀಡಲು ನಿರ್ದೇಶನ ನೀಡಿದಂತೆ, ಈ ಕೆಳಗಿನಂತೆ ವಿವರವಾದ ವರದಿಯನ್ನು ಸಲ್ಲಿಸಿದೆ.

ಮೊದಲನೆಯದಾಗಿ ಕಾರವಾರ ಕಡಲ ತೀರದಲ್ಲಿ ರಾಕ್ ಗಾರ್ಡನ್ ನಿರ್ಮಾಣ ಕಾರ್ಯ ನಡೆಯುತ್ತಿರುವುದು ಕಂಡುಬಂದಿದ್ದು, ಸದರಿ ಕಾಮಗಾರಿಗೆ ಈ ಕಛೇರಿಯಿಂದ ಪೂರ್ವಾನುಮತಿ ಪಡೆಯದೆ

ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿರುವ ಬಗ್ಗೆ ಕರಾವಳಿ ನಿಯಂತ್ರಣ ವಲಯ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಬಗ್ಗೆ ಉಲ್ಲೇಖ ಪತ್ರ(3)ರಂತೆ ದಿನಾಂಕ:06-06-2017 ರಂದು ಈ ಕಛೇರಿಯಿಂದ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ರವರಿಗೆ ನೋಟಿಸ್ ನೀಡಿ, ಸದರಿ ಕಾಮಗಾರಿಗೆ ಪೂರ್ವಾನುಮತಿ ಪಡೆಯಲು ಈ ಕಛೇರಿಯನ್ನು ಸಂಪರ್ಕಿಸಿ, ಅಗತ್ಯ ದಾಖಲೆಗಳೊಂದಿಗೆ ನಿಗಧಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿತ್ತು.

ಸದರಿ ವಿಷಯವಾಗಿ ಉಲ್ಲೇಖ ಪತ್ರ(4) ರಲ್ಲಿ ದಿನಾಂಕ: 14-07-2017ರಂದು CRZ ಅನುಮತಿ ಕೋರಿ ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಸದರಿ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನೀಡಿದ್ದು ಇರುವುದಿಲ್ಲ.ಈ ಕುರಿತು ಹಲವಾರು ಬಾರಿ ದಾಖಲೆ ಅಪೂರ್ಣವಿರುವ ಬಗ್ಗೆ ದೂರವಾಣಿ ಮೂಲಕ ಸೂಚಿಸಿದ್ದು ಇರುತ್ತದೆ. ನಂತರದಲ್ಲಿ ಉಲ್ಲೇಖ ಪತ್ರ(5)ರಂತೆ ದಿನಾಂಕ: 07-02-2018 ರಂದು ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರ ಇವರು, ಸದರಿ ಯೋಜನೆಗೆ ಸಂಬಂದಿಸಿದಂತೆ, ಯೋಜನೆಯ ಅಂದಾಜು ವೆಚ್ಚ ಪಟ್ಟಿ, ಯೋಜನೆಯ ವಿನ್ಯಾಸ ಮತ್ತು ಅನುಬಂಧ-IV ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸಿರುತ್ತಾರೆ. ಸದರಿ ಕಾಮಗಾರಿಯನ್ನು ಕೈಗೊಳ್ಳಲು ಡಾ. ರವೀಂದ್ರನಾಥ ಠಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯಿಂದ ಅನುಮತಿ ನೀಡಲಾಗಿರುತ್ತದೆ.

ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ-I ಮತ್ತು ಭಾಗಶಃ ವಲಯ- II ರಲ್ಲಿ ಬರುತ್ತಿದ್ದು (ನಕ್ಷೆ ಲಗತ್ತಿಸಿದೆ), ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಇದ್ದು, ಸದರಿ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಒಂದು ವೇಳೆ ಸದರಿ ಕಟ್ಟಡಗಳು 1990 ಕ್ಕಿಂತ ಪೂರ್ವದಲ್ಲಿ ನಿರ್ಮಾಣವಾಗಿದ್ದ ಕಟ್ಟಡಗಳು ಆಗಿದ್ದರೆ, ಪುನರ್‌ನಿರ್ಮಾಣ ಮತ್ತು ರಿಪೇರಿಗೆ ಮಾತ್ರ ಅವಕಾಶ ಇರುತ್ತದೆ. ಆದರೆ ಸದರಿ ಯೋಜನೆಗೆ ಸಂಬಂಧಿಸಿದಂತೆ 1990 ಕ್ಕಿಂತ ಪೂರ್ವದಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

ಕಾರವಾರ ಕಡಲತೀರದಲ್ಲಿ ಹೋಟೆಲ್ ಡ್ರೈವ್-ಇನ್ ಪಕ್ಕದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಈ ಕಛೇರಿಗೆ ದೂರು ಸಲ್ಲಿಸಿದ್ದು, ಸದರಿ ವಿಷಯವಾಗಿ ಅನುಮತಿ ಇಲ್ಲದೆ ಕರಾವಳಿ ನಿಯಂತ್ರಣ ವಲಯದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿರುವ ಬಗ್ಗೆ ನಗರಸಭೆ ಆಯುಕ್ತರು ಕಾರವಾರ ರವರಿಗೆ ಉಲ್ಲೇಖ ಪತ್ರ(6) ರಂತೆ ದಿನಾಂಕ: 26-09-2017 ರಂದು ಪತ್ರ ಬರೆದಿದ್ದು, ಅನುಮತಿ ಇಲ್ಲದೆ ಕರಾವಳಿ ನಿಯಂತ್ರಣ ವಲಯದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವವರ ಮೇಳೆ ಸೂಕ್ತ ಕ್ರಮ ಕೈಗೊಂಡು, ವರದಿಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ. ಆದರೆ ಸದರಿಯವರು ಈ ವಿಷಯದ ಕುರಿತು ಯಾವುದೇ ಕ್ರಮ ಕೈಗೊಂಡಿದ್ದು ಇರುವುದಿಲ್ಲ.ಮುಂದುವರೆದು ಉಲ್ಲೇಖ ಪತ್ರ(7)ರಲ್ಲಿ ದಿನಾಂಕ: 31-10-2017 ರಂದು ಸದರಿ ವಿಷಯವಾಗಿ ನೆನಪೋಲೆಯನ್ನು ನೀಡಿದ್ದು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಅತಿ ಶೀಘ್ರವಾಗಿ ಸಲ್ಲಿಸಿಲು ತಿಳಿಸಿದ್ದು ಇರುತ್ತದೆ. ಆದರೆ ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಸದರಿ ಮೇಲೆ ನಮೂದಿಸಿರುವ ಈ ಹಿಂದೆ ನಿರ್ಮಿಸಿರುವ ಡ್ರೈವ್-ಇನ್ ಹೊಟೇಲ್ ಇರುವ ಪ್ರದೇಶವು ಕರಾವಳಿ ನಿಯಂತ್ರಣ ವಲಯ-I ಮತ್ತು ಭಾಗಶಃ ವಲಯ-II ರಲ್ಲಿ ಬರುತ್ತಿದ್ದು, ಪ್ರಸ್ತುತ ನಿರ್ಮಿಸಿರುವ ಕಟ್ಟಡವೂ ಸಹ ವಲಯ- II ರಲ್ಲಿ ಬರುತ್ತಿದ್ದು, ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಇದ್ದು, ಸದರಿ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಕಾರಣ ಇದು ಕರಾವಳಿ ನಿಯಂತ್ರಣ ವಲಯ 2011 ಅಧಿಸೂಚನೆಯ ನಿಯಮಾವಳಿಗಳ ಪ್ರಕಾರ ಸ್ಪಷ್ಟ ಉಲ್ಲಂಘನೆಯಾಗಿದ್ದು ಇರುತ್ತದೆ.

ಶ್ರೀ. ರಾಜೇಶ ಎಸ್. ಕಾಮತ್, ಮಹಾಲಕ್ಷ್ಮೀ ಎಲೆಕ್ಟ್ರಾನಿಕ್ಸ್, ಕೋಡಿಬಾಗ, ಕಾರವಾರ ಇವರು ಕರಾವಳಿ ಕಾರವಾರ ಕಡಲತೀರದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದು ಕಂಡುಬಂದಿದ್ದು, ಕರಾವಳಿ

..3

ನಿಯಂತ್ರಣ ವಲಯದ ಯಾವುದೇ ಪೂರ್ವಾನುಮತಿ ಪಡೆದಿದ್ದು ಇರುವುದಿಲ್ಲ. ಸದರಿ ಪ್ರದೇಶದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಕುರಿತು ಶ್ರೀ. ರಾಜೇಶ ಎಸ್. ಕಾಮತ ರವರನ್ನು ವಿಚಾರಿಸಲಾಗಿ ಸದರಿಯವರು ಈ ಪ್ರದೇಶದಲ್ಲಿ ಬ್ರಾಂಡೆಡ್ ಆಹಾರಗಳ ಮಳಿಗೆ ನಿರ್ಮಾಣಕ್ಕಾಗಿ ಡಾ. ರವೀಂದ್ರನಾಥ ಠಾಗೋರ್ ಕಡಲತೀರ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯಿಂದ ಗುತ್ತಿಗೆ ಪಡೆದುಕೊಂಡಿದ್ದು, ಸದರಿಯವರು ನೀಡಿದ ಅನುಮತಿ ಮೇರೆಗೆ ಬ್ರಾಂಡೆಡ್ ಆಹಾರಗಳ ಮಳಿಗೆ ನಿರ್ಮಾಣ ಮಾಡುತ್ತಿರುವುದಾಗಿ ತಿಳಿಸಿರುತ್ತಾರೆ. ಕಾರಣ ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದನ್ನು, ಸ್ಥಗಿತಗೊಳಿಸಿ, ಖುಲ್ಲಾಪಡಿಸಿ ಸದರಿ ಸ್ಥಳವನ್ನು ಯಾಥಾಸ್ಥಿತಿಗೆ ಮರಳಿಸುವಂತೆ ಉಲ್ಲೇಖ ಪತ್ರ(8)ರಲ್ಲಿ ದಿನಾಂಕ: 19-12-2017 ರಂದು ನೋಟಿಸ್ ನೀಡಿದ್ದು ಇರುತ್ತದೆ ಮತ್ತು ಉತ್ತರ ಕನ್ನಡ ಜಿಲ್ಲಾ ಕಡಲತೀರ ಅಭಿವೃದ್ಧಿ ಸಮಿತಿಗೆ ಕರಾರನ್ನು ರದ್ದುಪಡಿಸಲು ಸೂಚಿಸಲಾಗಿದೆ.

ನಂತರದಲ್ಲಿ ಸದರಿಯವರು ದಿನಾಂಕ: 29-01-2018 ರಂದು ಉಲ್ಲೇಖ ಪತ್ರ(9)ರಂತೆ ಕಾರವಾರ ರವೀಂದ್ರನಾಥ ಠಾಗೋರ ಕಡಲತೀರದಲ್ಲಿ ಆಹಾರ ಮಳಿಗೆಯೊಂದಿಗೆ, ಕಡಲತೀರದಲ್ಲಿರುವ ಹಿಂದಿನ ತಾರಾಯಲ ಕಟ್ಟಡದ ಎಡ ಮತ್ತು ಬಲ ಭಾಗದಲ್ಲಿ ಅಭಿವೃದ್ಧಿ ಪಡಿಸಿ ತಾತ್ಕಾಲಿಕ ಕಟ್ಟಡ ಮತ್ತು ಶೌಚಾಲಯ ನಿರ್ಮಿಸಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ ಹಾಗೂ ಯೋಜನಾ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ಯೋಜನೆಗೆ ಸಂಬಂಧಿಸಿದಂತೆ 1990 ಕ್ಕಿಂತ ಪೂರ್ವದಲ್ಲಿ ಯವುದೇ ಕಟ್ಟಡಗಳು ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿದ್ದು ಇರುವುದಿಲ್ಲ.

ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ-I ಮತ್ತು ಭಾಗಶ ಕರಾವಳಿ ನಿಯಂತ್ರಣ ವಲಯ-II ರಲ್ಲಿ ಬರುತ್ತಿದ್ದು, ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಇರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಕಾರಣ ಇದು ಕರಾವಳಿ ನಿಯಂತ್ರಣ ವಲಯ 2011ರ ಅಧಿಸೂಚನೆಯ ನಿಯಮಾವಳಿಗಳ ಪ್ರಕಾರ ಸ್ಪಷ್ಟ ಉಲ್ಲಂಘನೆಯಾಗಿದ್ದು ಇರುತ್ತದೆ.

ಮುಂದುವರೆದು ಕಡಲ ತೀರ ಪ್ರದೇಶದಲ್ಲಿ ಈ ಹಿಂದೆ ತಾತ್ಕಾಲಿಕ ಮೀನು ಮಾರುಕಟ್ಟೆಯನ್ನು ನಿರ್ಮಿಸಲಾಗಿದ್ದು, ಸದರಿ ಕಟ್ಟಡ ನಿರ್ಮಾಣ ಮಾಡಲು ಯಾವುದೇ ಅನುಮತಿಯನ್ನು ಪಡೆದಿರುವುದಿಲ್ಲ.

ಅದೇ ರೀತಿ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರವಾರ ರವರು ಕಾರವಾರ ತಾಲೂಕಿನ ಚಿತ್ತಾಕುಲಾ ಗ್ರಾಮದ ಸರ್ವೆ ನಂಬರ 6ಅ1ಅ ರಲ್ಲಿ ಸಾಹಸ ಕ್ರೀಡೆಗೆ ಸಂಬಂಧಿಸಿದಂತೆ, ಸಾರ್ವಜನಿಕರಿಗೆ ತರಭೇತಿ ನೀಡಲು ವಸತಿ ನಿಲಯದ ಕಟ್ಟಡ ನಿರ್ಮಿಸಲು, ದಿನಾಂಕ: 25-06-2016 ರಂದು ಉಲ್ಲೇಖ ಪತ್ರ(10)ರಂತೆ ಈ ಕಛೇರಿಗೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ವಿಷಯವಾಗಿ ಸದರಿಯವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ಅರ್ಜಿಗೆ ಸಂಬಂಧಿಸಿದಂತೆ ದಾಖಲೆಗಳು ಅಪೂರ್ಣವಾಗಿದ್ದು, ದಿನಾಂಕ: 30-11-2016 ರಂದು ಉಲ್ಲೇಖ ಪತ್ರ(11)ರಲ್ಲಿ ಈ ಕಛೇರಿಯಿಂದ ಸಂಪೂರ್ಣ ದಾಖಲೆಗಳನ್ನು ಸಲ್ಲಿಸುವಂತೆ ಪತ್ರ ಬರೆಯಲಾಗಿತ್ತು.

ನಂತರದಲ್ಲಿ ಸದರಿ ವಿಷಯವಾಗಿ ಈ ಕಛೇರಿಯಿಂದ ಸ್ಥಳ ಪರಿಶೀಲನೆ ನಡೆಸಲಾಗಿ, ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ-III ರ ಅಭಿವೃದ್ಧಿ ನಿಷಿದ್ಧ ಪ್ರದೇಶದಲ್ಲಿ ಬರುತ್ತಿರುವುದು ಕಂಡುಬಂದಿದ್ದು ಇರುತ್ತದೆ. ಆದ್ದರಿಂದ ಸದರಿ ಪ್ರದೇಶದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಹಾಗೂ ಸ್ಥಳ ಪರಿಶೀಲನೆ ಸಮಯದಲ್ಲಿ ಆ ವೇಳೆ ಸದರಿ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ್ದು, ಮುಕ್ತಾಯದ ಹಂತದಲ್ಲಿ ಇರುವುದು ಕಂಡುಬರುತ್ತಿದೆ.

ಈ ರೀತಿಯಾಗಿ ಪೂರ್ವಾನುಮತಿ ಇಲ್ಲದೆ, ಕರಾವಳಿ ನಿಯಂತ್ರಣ ವಲಯದಲ್ಲಿ ಕಟ್ಟಡ ನಿರ್ಮಿಸಿರುವುದು ಕರಾವಳಿ ನಿಯಂತ್ರಣ ವಲಯ 2011ರ ಅಧಿಸೂಚನೆಯ ನಿಯಮಾವಳಿಗಳ ಪ್ರಕಾರ ಸ್ಪಷ್ಟ ಉಲ್ಲಂಘನೆಯಾಗಿದ್ದು ಇರುತ್ತದೆ.

..4

ಸದರಿ ವಿಷಯವಾಗಿ ಉಲ್ಲೇಖ ಪತ್ರ(12)ರಂತೆ ದಿನಾಂಕ:28-12-2017 ಸದರಿ ಅರ್ಜಿಗೆ ಸಂಬಂಧಿಸಿದಂತೆ, ಅನುಭಂದ-IV ರಲ್ಲಿ ಅರ್ಜಿ, ಆರ್.ಟಿ.ಸಿ., ಕಟ್ಟಡ ನಕ್ಷೆ ಮತ್ತು ಸದರಿ ಕಟ್ಟಡದ ಅಂದಾಜು ವೆಚ್ಚದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ವಿಷಯವಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಯೋಜನಾ ವರದಿ ಮತ್ತು ಅರ್ಜಿ ಪರಿಷ್ಕರಣಾ ಶುಲ್ಕ ಭರ್ತಿ ಮಾಡಲು ಉಲ್ಲೇಖ ಪತ್ರ(13)ರಲ್ಲಿ ದಿನಾಂಕ:05-01-2018 ರಂದು ಈ ಕಛೇರಿಯಿಂದ ಪತ್ರ ಬರೆಯಲಾಗಿದೆ.

ಸದರಿ ಕಟ್ಟಡವನ್ನು ಪ್ರಸ್ತುತ ಜಂಗಲ್ ಲಾಡ್ಜ್ & ರಿಸಾರ್ಟ್ಸ್ ಲಿಮಿಟೆಡ್ ದೇವಬಾಗ ಇವರಿಗೆ ಡಾ. ರವೀಂದ್ರನಾಥ ಠಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯಿಂದ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಸದರಿಯವರ ಉಪಯೋಗದಲ್ಲಿ ಇರುತ್ತದೆ.

ಮುಂದುವರೆದು ಈ ಹಿಂದೆ ನಿರ್ಮಿಸಿದ್ದ ಮಯೂರವರ್ಮ ವೇದಿಕೆಯ ಹಿಂಭಾಗದಲ್ಲಿ ಕಟ್ಟಡವನ್ನು ಮತ್ತು ತಾತ್ಕಾಲಿಕ ಮೀನು ಮಾರುಕಟ್ಟೆಯನ್ನು ನಿರ್ಮಿಸಲಾಗಿದ್ದು ಸದರಿ ಪ್ರದೇಶವೂ ಸಹ ಕರಾವಳಿ ನಿಯಂತ್ರಣ ವಲಯ-II ರಲ್ಲಿ ಬರುತ್ತಿದ್ದು. ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಬರುತ್ತಿದ್ದು ಯಾವುದೇ ಪೂರ್ವಾನುಮತಿ ಪಡೆದಿರುವುದಿಲ್ಲ.

ಈ ಮೇಲೆ ನಮೂದಿಸಿರುವ ಎಲ್ಲಾ ಕಟ್ಟಡಗಳನ್ನು ಕರಾವಳಿ ನಿಯಂತ್ರಣ ವಲಯ ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿದ್ದು, ಯಾವುದೇ ಪೂರ್ವಾನುಮತಿ ಪಡೆಯದೇ ಇರುವುದರಿಂದ ಕರಾವಳಿ ನಿಯಂತ್ರಣ ವಲಯ-2011ರ ಅಧಿಸೂಚನೆಯ ಸ್ಪಷ್ಟ ಉಲ್ಲಂಘನೆ ಆಗಿರುತ್ತದೆ ಎಂಬ ವರದಿಯನ್ನು ತಮ್ಮ ಅವಗಾಹನೆಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ,

ಅಡಕ:1) ಉಲ್ಲೇಖ ಪತ್ರ 3,6,7,8&11 ರ ಪ್ರತಿ

2) CRZ ನಕ್ಷೆ

3) ಕಡಲ ತೀರ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿ ಸಭೆಯ ನಡುವಳಿ ಪ್ರತಿ.

3/4/18

ಪ್ರಾದೇಶಿಕ ನಿರ್ದೇಶಕರು(ಪರಿಸರ)
ಕಾರವಾರ.

**Translated Copy**
**Annexure- II**

**Office of the Regional Director (Env.) (Forest Ecology and Enviroment) Parisara Bhavana, Habbuwada Karwar-581306, E-mail rdekwr2010@gmail.com Phone: 08383-223997**

No: RDE/ CRZ/ R.Violation/2018-19/03 Date: 03-04-2018

To:

Secretary to Government
(Environment and Ecology)
Dept. of Forest, Environment and Ecology
Bengaluru

Sir,

Sub: Conservation of the endangered Karwar Beach - reg

Ref: 1) Direction of meeting on Draft CZMP Date: 15-02-2018,
2) Your Office Letter Number: FEE06 CRZ Date: 07/09/2017
3) This Office Notice Letter No.RDE/CRZ/Notice/2017-18/386 Dated 06-06-2017
4) Zilla Nirmiti Kendra Karwar Application dated 14-07-2017,
5) Zilla Nirmiti Kendra, Karwar Application dated 07-02-2018.
6) This Office Letter Number: RDE/CRZ/Hotel- Violation/2017-18/841 dated 26-09-2017
7) This Office Letter Number: RDE/CRZ/Hotel- Violation /2017-18/208 dated 31-10-2017.
8) This office notice letter number RDE/CRZ/Violation /2017-18 dated 19-12-2017.
9) Shri, Rajesh S, Kamath, Karwar's Application Date: 29-01-2018.
10) Department of Youth Services, Karwar Application Date: 25-01-2016.
11) This Office Letter No RDE/CRZ/ದಾಪ/2016-17/520 Dt:30-11-2016.
12) Letter from the Department of Youth Services, Karwar dated 28-12-2017.
13) This office letter no: RDE/CRZ /2017-18/286 Date:05-1-2018.

* * * *

With respect to the above subject as per reference (1) cited above, as per the direction of the Draft Karnataka State Coastal Zone Management Planning meeting held on 15-02-2018, as per the letter (2) ,legal notice issued to protect the endangered Karwar beach from illegal construction of buildings on the sea shores , a detailed report is submitted as follows.

Firstly It is found that construction of Rock Garden work is going on in Karwar beach without prior permission from CRZ , since the area comes under CRZ Zone, a notice was issued as per reference (3) to the Project Manager, Zilla Nirmiti Kendra Karwar to consult this office with all relevant documents and take prior permission as per prescribed proforma.

Accordingly, they applied with reference Letter (4) on 14-07-2017 to this office seeking CRZ permission. However, no proper documents have been submitted regarding the project. With several reminders over phone they have been asked to submit proper documents, Subsequently as per Reference Letter (5) dated: 07.02.2018, the Zilla Nirmiti Kendra has submitted the Estimated Cost of the Project, Project Design and Appendix IV for the project. The permission to take up this work is granted by Dr. Rabindranath Tagore Beach Development and Conservation Committee Karwar.

The area falls in the Coastal Regulation Zone-1 and partly in Zone-II (map attached) since the area is located on the sea side from road, there is no provision to build any new construction in the said area. Only the structures built prior to 1990 can be considered only to rebuild or repair. However, there are no records found prior to 1990 regarding the said project work.

Complaints have been received to this office regarding construction of a building attached to Drive in Hotel at Karwar beach, accordingly Notice was issued to Commissioner, CMC Karwar as per reference (6) on 26-09-2017 to take proper action for taking up development activities in CRZ area of Karwar beach without taking prior permission from CRZ and submit report to this office. But no action has been taken. Further reminder letters were issued as per reference (7) on 31-07-2017 , however no action has been initiated by the concerned.

The afore mentioned area of earlier built Drive-in Hotel is in the Coastal Regulation Zone-I and partly in Zone-II , while the existing building is also in Zone-II, and is on the sea side of from the road, where there is no provision for any new building construction in this area. Hence it is a clear violation as per CRZ Notification-2011.

On Karwar beach area, Mr. Rajesh S. Kamath, Mahalaxmi Electronics, Kodibhag, Karwar was carrying out some development work without prior approval form Coastal Regulatory Zone. On enquiry about construction of building in this area, Mr. Rajesh S. Kamat informed that the area was given on lease by Tagore Beach Development and Conservation Committee Karwar for construction of branded food court and as per the

Permission given by the committee construction for branded food court is being taken. So as per reference(8) dated 19-12-2017 instructed to stop the development activities and to restore the site to normalcy and informed Uttara Kannada District Beach Development Committee to cancel the agreement.

Subsequently, as per reference (9) he submitted a project report and requested for permission to build a temporary building and toilet by renovating left and right side of Planetarium building along with food court in Rabindranath Tagore beach. However, no records of the buildings existed prior to 1990s have been submitted to this office.

The area falls into the CRZ-I and partly in CRZ -II, falls towards sea side from the authorised road. There is no provision for any new construction in this area. So it is a clear violation of the Coastal Regulation Zone 2011 Notification Regulations.

Further a temporary fish market was previously built on the beach and no permission was taken for this construction.

Similarly, Assistant Director, Youth Empowerment and Sports Department Karwar has submitted an application as per reference (10) dated 25-06-2016 to build Hostel building for adventure sports in Sy.No.6 a 1a of Chittakula village of Karwar Taluka. On verification, submitted records have been found to be incomplete and as per reference (11) letter were written on 30-11-2016 to submit all related documents.

Subsequent inspection by this office as per the subject, this area was found to be coming under the No development Zone of CRZ-III. So there is no provision to build any new construction in this area and at the time of verification it is found the construction was going on and in the last phase of completion. Constructing a building without prior permission from CRZ is a clear violation of CRZ Notification-2011.

This way constructing building in Coastal Regulation Zone area with no prior permission of Coastal Regulation Zone is a clear violation of Coastal Regulation Zone-2011 notification.

With reference to this, as per reference (12) dated 28-12-2017, relating to this application ,they have submitted application in Annexure-IV, RTC, Building Plan, Estimate records to this office. Letter is written as per reference (13) dated 05-01-2018 to remit application processing fees and to submit the project report .

Presently this building is in use by Jungle Lodges and Resorts Ltd, Devbhag since it is leased out by Rabindranath Tagore Beach Development and Conservation Committee for

Further a building built on the backside of the earlier built Mayuravarma Platform & temporary fish market too falls under Coastal Regulation Zone -II, towards sea from the authorised Road and no Prior permission is obtained.

All of the above buildings are being constructed in the Coastal Regulation Zone without any prior approval of the Coastal Regulation Zone , hence it is a clear violation of CRZ Notification- 2011, the report is respectfully submitted for appropriate action.

Encl: 1) Copy of Reference Letters 3,6,7,8 & 11

2) CRZ Map

3) Beach Development and Conservation committee meeting proceeding.

Yours faithfully

-Sd/-

Regional Director (Environment)

Karwar.

ಪ್ರಾದೇಶಿಕ ನಿರ್ದೇಶಕರು (ಪರಿಸರ) ಕಛೇರಿ, (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ) ಪರಿಸರ ಭವನ,ಹಬ್ಬುವಾಡಾ,
ಕಾರವಾರ-581306 ಇ-ಮೇಲ್: rdekwr2010@gmail.com, ದೂರವಾಣಿ/ಫ್ಯಾಕ್ಸ್: 08382-223997

ಪ್ರಾನಿಪ/ಕನಿವ/ನಿ.ಉಲ್ಲಂಘನೆ/2017-18 /66 ದಿನಾಂಕ: 26 / 4 /2018

ಇವರಿಗೆ,

ಪ್ರಧಾನ ಕಾರ್ಯದರ್ಶಿಗಳು,
(ಪರಿಸರ ಮತ್ತು ಜೀವಿಶಾಸ್ತ್ರ)
ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ,
ಬೆಂಗಳೂರು.

ಮಾನ್ಯರೇ,

ವಿಷಯ: ನಾಶವಾಗುತ್ತಿರುವ ಕಾರವಾರ ಕಡಲ ತೀರವನ್ನು ಸಂರಕ್ಷಿಸುವ ಕುರಿತು.

ಉಲ್ಲೇಖ: 1) ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ ಸಭೆಯ ನಿರ್ದೇಶನ ದಿನಾಂಕ: 15-02-2018.
2) ತಮ್ಮ ಕಛೇರಿ ಪತ್ರ ಸಂಖ್ಯೆ:ಅಪಜೀ 06 ಸಿಆರ್‌ಝೆಡ್, ದಿನಾಂಕ:07/09/2017.
3) ಈ ಕಛೇರಿ ನೋಟಿಸ್ ಪತ್ರ ಸಂಖ್ಯೆ:ಪ್ರಾನಿಪ/ಕನಿವ/ನೋಟಿಸ್/2017-18/386 ದಿನಾಂಕ: 06-06-2017.
4) ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ರವರ ಅರ್ಜಿ ದಿನಾಂಕ: 14-07-2017.
5) ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ರವರ ಅರ್ಜಿ ದಿನಾಂಕ: 07-02-2018.
6) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/ಹೋಟೆಲ್ ಉಲ್ಲಂಘನೆ/2017-18/841, ದಿನಾಂಕ:26-9-2017.
7) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/ಹೋಟೆಲ್ ಉಲ್ಲಂಘನೆ/2017-18/929, ದಿನಾಂಕ:31-10-2017.
8) ಈ ಕಛೇರಿ ನೋಟಿಸ್ ಪತ್ರ ಸಂಖ್ಯೆ:ಪ್ರಾನಿಪ/ಕನಿವ/ನಿ. ಉಲ್ಲಂಘನೆ/2017-18/208, ದಿನಾಂಕ: 19-12-2017.
9) ಶ್ರೀ. ರಾಜೇಶ ಎಸ್. ಕಾಮತ್,ಕಾರವಾರ ರವರ ಅರ್ಜಿ ದಿನಾಂಕ: 29-01-2018.
10) ಯುವಜನ ಸೇವಾ ಇಲಾಖೆ, ಕಾರವಾರ ರವರ ಅರ್ಜಿ ದಿನಾಂಕ: 25-01-2016.
11) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/ದಾ.ಪ./2016-17/520,ದಿನಾಂಕ: 30-11-2016.
12) ಯುವಜನ ಸೇವಾ ಇಲಾಖೆ, ಕಾರವಾರ ರವರ ಪತ್ರ ದಿನಾಂಕ:28-12-2017.
13) ಈ ಕಛೇರಿ ಪತ್ರ ಸಂಖ್ಯೆ: ಪ್ರಾನಿಪ/ಕನಿವ/2017-18/286,ದಿನಾಂಕ: 05-1-2018.

*************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಂತೆ ದಿನಾಂಕ: 15-02-2018 ರಂದು ನಡೆದ ಕರಡು ಕರ್ನಾಟಕ ರಾಜ್ಯ ಕಡಲತೀರ ವಲಯ ನಿರ್ವಹಣಾ ಯೋಜನೆ ಸಭೆಯಲ್ಲಿ ಉಲ್ಲೇಖ ಪತ್ರ (2) ರಲ್ಲಿ ಕಾರವಾರ ಕಡಲ ತೀರದಲ್ಲಿ ಕಾನೂನು ಬಾಹಿರವಾಗಿ ಕಟ್ಟಡಗಳು ನಿರ್ಮಾಣವಾಗಿದ್ದು, ಇದರಿಂದ

ನಾಶವಾಗುತ್ತಿರುವ ಕಾರವಾರ ಕಡಲ ತೀರವನ್ನು ಸಂರಕ್ಷಿಸುವಂತೆ ನೀಡಿರುವ ಲೀಗಲ್ ನೋಟಿಸ್ ಪ್ರಕಾರ ಸ್ಥಳ ಪರಿಶೀಲಿಸಿ ವರದಿ ನೀಡಲು ನಿರ್ದೇಶನ ನೀಡಿದಂತೆ, ಈ ಕೆಳಗಿನಂತೆ ವಿವರವಾದ ವರದಿಯನ್ನು ಸಲ್ಲಿಸಿದೆ.

**1.ರಾಕ್ ಗಾರ್ಡನ್:**

ಕಾರವಾರ ಕಡಲ ತೀರದಲ್ಲಿ ರಾಕ್ ಗಾರ್ಡನ್ ನಿರ್ಮಾಣ ಕಾರ್ಯ ನಡೆಯುತ್ತಿರುವುದು ಕಂಡುಬಂದಿದ್ದು, ವಿಚಾರಿಸಲಾಗಿ ಸದರಿ ಕಾಮಗಾರಿಯನ್ನು ಜಿಲ್ಲಾ ನಿರ್ಮಿತಿ ಕೇಂದ್ರದಿಂದ ಕೈಗೊಳ್ಳಲಾಗಿದ್ದು, ದಿನಾಂಕ: 20-2-2017ರಂದು ನಡೆದ ಸಭೆಯಲ್ಲಿ ರವೀಂದ್ರನಾಥ ಕಡಲ ತೀರಗಳ ಅಭಿವೃದ್ಧಿಯಡಿ ಸಂರಕ್ಷಣಾ ಸಮಿತಿಯಿಂದ ಅನುಮೋದನೆ ನೀಡಲಾಗಿರುತ್ತದೆ. ಸದರಿ ಕಾಮಗಾರಿಗೆ ಈ ಕಛೇರಿಯಿಂದ ಪೂರ್ವಾನುಮತಿ ಪಡೆಯದೆ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿರುವ ಬಗ್ಗೆ ಕರಾವಳಿ ನಿಯಂತ್ರಣ ವಲಯ ನಿಯಮಗಳನ್ನು ಉಲ್ಲಂಘನೆ ಮಾಡಿರುವ ಬಗ್ಗೆ ಉಲ್ಲೇಖ ಪತ್ರ(3)ರಂತೆ ದಿನಾಂಕ:06-06-2017 ರಂದು ಈ ಕಛೇರಿಯಿಂದ ಯೋಜನಾ ವ್ಯವಸ್ಥಾಪಕರು, ಜಿಲ್ಲಾ ನಿರ್ಮಿತಿ ಕೇಂದ್ರ, ಕಾರವಾರ ರವರಿಗೆ ನೋಟಿಸ್ ನೀಡಿ, ಸದರಿ ಕಾಮಗಾರಿಗೆ ಪೂರ್ವಾನುಮತಿ ಪಡೆಯಲು ಈ ಕಛೇರಿಯನ್ನು ಸಂಪರ್ಕಿಸಿ, ಅಗತ್ಯ ದಾಖಲೆಗಳೊಂದಿಗೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಲು ತಿಳಿಸಲಾಗಿತ್ತು.

ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ-I ಮತ್ತು ಭಾಗಶಃ ವಲಯ-II ರಲ್ಲಿ ಬರುತ್ತಿದ್ದು, ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಇದ್ದು, ಪ್ಯಾರಾ 8.I.CRZ-I ಮತ್ತು 8.II CRZ II (ii) ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಒಂದು ವೇಳೆ ಸದರಿ ಕಟ್ಟಡಗಳು 1990 ಕ್ಕಿಂತ ಪೂರ್ವದಲ್ಲಿ ನಿರ್ಮಾಣವಾಗಿದ್ದ ಕಟ್ಟಡಗಳು ಆಗಿದ್ದರೆ, ಪುನರ್‌ನಿರ್ಮಾಣ ಮತ್ತು ರಿಪೇರಿಗೆ ಮಾತ್ರ ಅವಕಾಶ ಇರುತ್ತದೆ. ಆದರೆ ಸದರಿ ಯೋಜನೆಗೆ ಸಂಬಂಧಿಸಿದಂತೆ 1990 ಕ್ಕಿಂತ ಪೂರ್ವದಲ್ಲಿ ಇದ್ದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲ.

ಸದರಿ ವಿಷಯವಾಗಿ ಉಲ್ಲೇಖ ಪತ್ರ(4) ರಲ್ಲಿ ದಿನಾಂಕ: 14-07-2017ರಂದು CRZ ಅನುಮತಿ ಕೋರಿ ಈ ಕಛೇರಿಗೆ ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಸದರಿ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನು ನೀಡಿದ್ದು ಇರುವುದಿಲ್ಲ.ಈ ಕುರಿತು ಹಲವಾರು ಬಾರಿ ದಾಖಲೆ ಅಪೂರ್ಣವಿರುವ ಬಗ್ಗೆ ದೂರವಾಣಿ ಮೂಲಕ ಸೂಚಿಸಿದ್ದು ಇರುತ್ತದೆ. ನಂತರದಲ್ಲಿ ಉಲ್ಲೇಖ ಪತ್ರ(5)ರಂತೆ ದಿನಾಂಕ: 07-02-2018 ರಂದು ಜಿಲ್ಲಾ ನಿರ್ಮಿತಿ ಕೇಂದ್ರ ಕಾರವಾರ ಇವರು, ಸದರಿ ಯೋಜನೆಗೆ ಸಂಬಂದಿಸಿದಂತೆ, ಯೋಜನೆಯ ಅಂದಾಜು ವೆಚ್ಚ ಪಟ್ಟಿ, ಯೋಜನೆಯ ವಿನ್ಯಾಸ ಮತ್ತು ಅನುಬಂಧ-IV ಅರ್ಜಿಯನ್ನು ಭರ್ತಿಮಾಡಿ ಸಲ್ಲಿಸಿರುತ್ತಾರೆ. ಪ್ರಸ್ತುತ ಸದರಿ ಕಾಮಗಾರಿ ಪೂರ್ಣಗೊಂಡಿದ್ದು ರಾಕ್‌ಗಾರ್ಡನ್ ಉದ್ಘಾಟನೆ ಮಾಡಲಾಗಿರುತ್ತದೆ.

**2. ಡ್ರೈವ್-ಇನ್ ಹೊಟೇಲ್ ಮತ್ತು ನೆಲಸಿರಿ ಉತ್ತರಕನ್ನಡ ಉತ್ಪನ್ನಗಳ ಮಾರಾಟ ಮಳಿಗೆ ಕಟ್ಟಡ:**

ಕಾರವಾರ ಕಡಲತೀರದಲ್ಲಿ ಹೋಟೆಲ್ ಡ್ರೈವ್-ಇನ್ ಪಕ್ಕದಲ್ಲಿ ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡುತ್ತಿರುವ ಬಗ್ಗೆ ಈ ಕಛೇರಿಗೆ ದೂರು ಸಲ್ಲಿಸಿದ್ದು, ಸದರಿ ವಿಷಯವಾಗಿ ಪರಿಶೀಲಿಸಲಾಗಿ ಸದರಿ ಡ್ರೈವ್-ಇನ್ ಹೊಟೇಲನ್ನು ಈ ಹಿಂದೆಯೇ ನಿರ್ಮಿಸಲಾಗಿದ್ದು ಪ್ರಸ್ತುತ ಉತ್ತರ ಕನ್ನಡ ಉತ್ಪನ್ನಗಳ ಮಾರಾಟಕ್ಕಾಗಿ

ಅದಕ್ಕೆ ಹೊಂದಿಕೊಂಡು ಇನ್ನೊಂದು G+2 ಕಟ್ಟಡವನ್ನು ನಿರ್ಮಿಸಲು ದಿನಾಂಕ 20-2-2017ರಂದು ನಡೆದ ಸಭೆಯಲ್ಲಿ ರವೀಂದ್ರನಾಥ ಕಡಲ ತೀರಗಳ ಅಭಿವೃದ್ಧಿ ಸಂರಕ್ಷಣಾ ಸಮಿತಿಯಿಂದ ಅನುಮೋದನೆ ನೀಡಲಾಗಿರುತ್ತದೆ. ಅನುಮತಿ ಇಲ್ಲದೆ ಕರಾವಳಿ ನಿಯಂತ್ರಣ ವಲಯದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಂಡಿರುವ ಬಗ್ಗೆ ನಗರಸಭೆ ಆಯುಕ್ತರು ಕಾರವಾರ ರವರಿಗೆ ಉಲ್ಲೇಖ ಪತ್ರ(6) ರಂತೆ ದಿನಾಂಕ: 26-09-2017 ರಂದು ಪತ್ರ ಬರೆದಿದ್ದು, ಅನುಮತಿ ಇಲ್ಲದೆ ಕರಾವಳಿ ನಿಯಂತ್ರಣ ವಲಯದಲ್ಲಿ ಕಟ್ಟಡ ನಿರ್ಮಾಣ ಮಾಡುತ್ತಿರುವವರ ಮೇಲೆ ಸೂಕ್ತ ಕ್ರಮ ಕೈಗೊಂಡು, ವರದಿಯನ್ನು ಸಲ್ಲಿಸಲು ತಿಳಿಸಲಾಗಿರುತ್ತದೆ. ಆದರೆ ಸದರಿಯವರು ಈ ವಿಷಯದ ಕುರಿತು ಯಾವುದೇ ವರದಿಯನ್ನು ಸಲ್ಲಿಸಿದ್ದು ಇರುವುದಿಲ್ಲ.ಮುಂದುವರೆದು ಉಲ್ಲೇಖ ಪತ್ರ(7)ರಲ್ಲಿ ದಿನಾಂಕ: 31-10-2017 ರಂದು ಸದರಿ ವಿಷಯವಾಗಿ ನೆನಪೋಲೆಯನ್ನು ನೀಡಿದ್ದು, ಕೈಗೊಂಡ ಕ್ರಮದ ಬಗ್ಗೆ ವರದಿಯನ್ನು ಅತಿ ಶೀಘ್ರವಾಗಿ ಸಲ್ಲಿಸಲು ತಿಳಿಸಿದ್ದು ಇರುತ್ತದೆ. ಆದರೆ ಸದರಿಯವರು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ.

ಸದರಿ ಮೇಲೆ ನಮೂದಿಸಿರುವ ಈ ಹಿಂದೆ ನಿರ್ಮಿಸಿರುವ ಡ್ರೈವ್-ಇನ್ ಹೋಟೇಲ್ ಇರುವ ಪ್ರದೇಶವು ಕರಾವಳಿ ನಿಯಂತ್ರಣ ವಲಯ-I ಮತ್ತು ಭಾಗಶಃ ವಲಯ-2 ರಲ್ಲಿ ಬರುತ್ತಿದ್ದು, ಪ್ರಸ್ತುತ ನಿರ್ಮಿಸಿರುವ ಕಟ್ಟಡವೂ ಸಹ ವಲಯ-2 ರಲ್ಲಿ ಬರುತ್ತಿದ್ದು, ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಇದ್ದು, ಪ್ಯಾರಾ 8.I.CRZ-I ಮತ್ತು 8.II CRZ II (ii) ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ, ಕಾರಣ ಇದು ಕರಾವಳಿ ನಿಯಂತ್ರಣ ವಲಯ 2011 ಅಧಿಸೂಚನೆಯ ನಿಯಮಾವಳಿಗಳ ಪ್ರಕಾರ ಸ್ಪಷ್ಟ ಉಲ್ಲಂಘನೆಯಾಗಿದ್ದು ಇರುತ್ತದೆ. ಪ್ರಸ್ತುತ 2 ಅಂತಸ್ತಿನ ಕಟ್ಟಡವನ್ನು ನಿರ್ಮಿಸಿದ್ದು ಬಳಕೆಯಲ್ಲಿರುತ್ತದೆ.

3. **ಬ್ರಾಂಡೆಡ್ ಆಹಾರಗಳ ಮಳಿಗೆ:**

ಶ್ರೀ. ರಾಜೇಶ ಎಸ್ ಕಾಮತ್, ಮಹಾಲಕ್ಷ್ಮೀ ಎಲೆಕ್ಟ್ರಾನಿಕ್ಸ್, ಕೋಡಿಬಾಗ, ಕಾರವಾರ ಇವರು ಕರಾವಳಿ ಕಾರವಾರ ಕಡಲತೀರದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದು ಕಂಡುಬಂದಿದ್ದು, ಕರಾವಳಿ ನಿಯಂತ್ರಣ ವಲಯದ ಯಾವುದೇ ಪೂರ್ವಾನುಮತಿ ಪಡೆದಿದ್ದು ಇರುವುದಿಲ್ಲ. ಕಾರಣ ಸದರಿ ಪ್ರದೇಶದಲ್ಲಿ ಅಭಿವೃದ್ಧಿ ಚಟುವಟಿಕೆಗಳನ್ನು ಕೈಗೊಳ್ಳುತ್ತಿರುವುದನ್ನು, ಸ್ಥಗಿತಗೊಳಿಸಿ, ಖುಲ್ಲಾಪಡಿಸಿ ಸದರಿ ಸ್ಥಳವನ್ನು ಯಾಥಾಸ್ಥಿತಿಗೆ ಮರಳಿಸುವಂತೆ ಉಲ್ಲೇಖ ಪತ್ರ(8)ರಲ್ಲಿ ದಿನಾಂಕ: 19-12-2017 ರಂದು ನೋಟಿಸ್ ನೀಡಿದ್ದು ಇರುತ್ತದೆ ಮತ್ತು ಉತ್ತರ ಕನ್ನಡ ಜಿಲ್ಲಾ ಕಡಲತೀರ ಅಭಿವೃದ್ಧಿ ಸಮಿತಿಗೆ ಕರಾರನ್ನು ರದ್ದುಪಡಿಸಲು ಸೂಚಿಸಲಾಗಿದ್ದು, ಯಾವುದೇ ಕ್ರಮ ಕೈಗೊಂಡಿದ್ದು ಇರುವುದಿಲ್ಲ.

ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ-I ಮತ್ತು ಭಾಗಶ ಕರಾವಳಿ ನಿಯಂತ್ರಣ ವಲಯ-II ರಲ್ಲಿ ಬರುತ್ತಿದ್ದು, ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಇರುತ್ತದೆ. ಕಾರಣ ಸಿ.ಆರ್.ಜೆಡ್. ಅಧಿಸೂಚನೆ ಪ್ಯಾರಾ 8.I.CRZ-I ಮತ್ತು 8.II CRZ II (ii) ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ. ಸದರಿ ಪ್ರದೇಶದಲ್ಲಿ ಯಾವುದೇ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಕಾರಣ ಇದು ಕರಾವಳಿ ನಿಯಂತ್ರಣ ವಲಯ 2011ರ ಅಧಿಸೂಚನೆಯ ನಿಯಮಾವಳಿಗಳ ಪ್ರಕಾರ ಸ್ಪಷ್ಟ ಉಲ್ಲಂಘನೆಯಾಗಿದ್ದು ಇರುತ್ತದೆ.

ನಂತರದಲ್ಲಿ ಸದರಿಯವರು ದಿನಾಂಕ: 29-01-2018 ರಂದು ಉಲ್ಲೇಖ ಪತ್ರ(9)ರಂತೆ ಕಾರವಾರ ರವೀಂದ್ರನಾಥ ಠಾಗೋರ ಕಡಲತೀರದಲ್ಲಿ ಆಹಾರ ಮಳಿಗೆಯೊಂದಿಗೆ, ಕಡಲತೀರದಲ್ಲಿರುವ ಹಿಂದಿನ ತಾರಾಯಲ ಕಟ್ಟಡದ ಎಡ ಮತ್ತು ಬಲ ಭಾಗದಲ್ಲಿ ಅಭಿವೃದ್ಧಿ ಪಡಿಸಿ ತಾತ್ಕಾಲಿಕ ಕಟ್ಟಡ ಮತ್ತು ಶೌಚಾಲಯ ನಿರ್ಮಿಸಲು ಅನುಮತಿ ನೀಡಬೇಕಾಗಿ ಕೋರಿರುತ್ತಾರೆ ಹಾಗೂ ಯೋಜನಾ ವರದಿಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ಯೋಜನೆಗೆ ಸಂಬಂಧಿಸಿದಂತೆ 1990 ಕ್ಕಿಂತ ಪೂರ್ವದಲ್ಲಿ ಯವುದೇ ಕಟ್ಟಡಗಳು ಇದ್ದ ಬಗ್ಗೆ ಯಾವುದೇ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿದ್ದು ಇರುವುದಿಲ್ಲ.

**4. ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರವಾರ ರವರು ನಿರ್ಮಿಸಿದ ಕಟ್ಟಡ:**

ಅದೇ ರೀತಿ ಸಹಾಯಕ ನಿರ್ದೇಶಕರು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಕಾರವಾರ ರವರು ಕಾರವಾರ ತಾಲೂಕಿನ ಚಿತ್ತಾಕುಲಾ ಗ್ರಾಮದ ಸರ್ವೆ ನಂಬರ 6ಅ1ಅ ರಲ್ಲಿ ಸಾಹಸ ಕ್ರೀಡೆಗೆ ಸಂಬಂಧಿಸಿದಂತೆ, ಸಾರ್ವಜನಿಕರಿಗೆ ತರಬೇತಿ ನೀಡಲು ವಸತಿ ನಿಲಯದ ಕಟ್ಟಡ ನಿರ್ಮಿಸಲು, ದಿನಾಂಕ: 25-06-2016 ರಂದು ಉಲ್ಲೇಖ ಪತ್ರ(10)ರಂತೆ ಈ ಕಛೇರಿಗೆ ಅರ್ಜಿ ಸಲ್ಲಿಸಿದ್ದು ಇರುತ್ತದೆ. ಸದರಿ ವಿಷಯವಾಗಿ ಸದರಿಯವರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ಅರ್ಜಿಗೆ ಸಂಬಂಧಿಸಿದಂತೆ ದಾಖಲೆಗಳು ಅಪೂರ್ಣವಾಗಿದ್ದು, ದಿನಾಂಕ: 30-11-2016 ರಂದು ಉಲ್ಲೇಖ ಪತ್ರ(11)ರಲ್ಲಿ ಈ ಕಛೇರಿಯಿಂದ ಸಂಪೂರ್ಣ ದಾಖಲೆಗಳನ್ನು ಸಲ್ಲಿಸುವಂತೆ ಪತ್ರ ಬರೆಯಲಾಗಿತ್ತು.

ನಂತರದಲ್ಲಿ ಸದರಿ ವಿಷಯವಾಗಿ ಈ ಕಛೇರಿಯಿಂದ ಸ್ಥಳ ಪರಿಶೀಲನೆ ನಡೆಸಲಾಗಿ, ಸದರಿ ಪ್ರದೇಶವು ಕರಾವಳಿ ನಿಯಂತ್ರಣ ವಲಯ-III ರ ಅಭಿವೃದ್ಧಿ ನಿಷಿದ್ಧ ಪ್ರದೇಶದಲ್ಲಿ ಬರುತ್ತಿರುವುದು ಕಂಡುಬಂದಿದ್ದು ಸಿ.ಆರ್.ಜೆಡ್. ಅಧಿಸೂಚನೆ ಪ್ಯಾರಾ 8.I.CRZ-I ಮತ್ತು 8.II CRZ II (ii) ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಸದರಿ ಪ್ರದೇಶದಲ್ಲಿ ಹೊಸ ಕಟ್ಟಡ ನಿರ್ಮಾಣಕ್ಕೆ ಅವಕಾಶ ಇರುವುದಿಲ್ಲ. ಹಾಗೂ ಸ್ಥಳ ಪರಿಶೀಲನೆ ಸಮಯದಲ್ಲಿ ಆ ವೇಳೆ ಸದರಿ ಕಟ್ಟಡವನ್ನು ಕಟ್ಟಲು ಪ್ರಾರಂಭಿಸಿದ್ದು, ಮುಕ್ತಾಯದ ಹಂತದಲ್ಲಿ ಇರುವುದು ಕಂಡುಬರುತ್ತಿದೆ.

ಈ ರೀತಿಯಾಗಿ ಪೂರ್ವಾನುಮತಿ ಇಲ್ಲದೆ, ಕರಾವಳಿ ನಿಯಂತ್ರಣ ವಲಯದಲ್ಲಿ ಕಟ್ಟಡ ನಿರ್ಮಿಸಿರುವುದು ಕರಾವಳಿ ನಿಯಂತ್ರಣ ವಲಯ 2011ರ ಅಧಿಸೂಚನೆಯ ನಿಯಮಾವಳಿಗಳ ಪ್ರಕಾರ ಸ್ಪಷ್ಟ ಉಲ್ಲಂಘನೆಯಾಗಿದ್ದು ಇರುತ್ತದೆ.

ಸದರಿ ವಿಷಯವಾಗಿ ಉಲ್ಲೇಖ ಪತ್ರ(12)ರಂತೆ ದಿನಾಂಕ: 28-12-2017 ಸದರಿ ಅರ್ಜಿಗೆ ಸಂಬಂಧಿಸಿದಂತೆ, ಅನುಭಂದ-IV ರಲ್ಲಿ ಅರ್ಜಿ, ಆರ್. ಟಿ. ಸಿ., ಕಟ್ಟಡ ನಕ್ಷೆ ಮತ್ತು ಸದರಿ ಕಟ್ಟಡದ ಅಂದಾಜು ವೆಚ್ಚದ ದಾಖಲೆಗಳನ್ನು ಈ ಕಛೇರಿಗೆ ಸಲ್ಲಿಸಿರುತ್ತಾರೆ. ಸದರಿ ವಿಷಯವಾಗಿ ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ಯೋಜನಾ ವರದಿ ಮತ್ತು ಅರ್ಜಿ ಪರಿಷ್ಕರಣಾ ಶುಲ್ಕ ಭರ್ತಿ ಮಾಡಲು ಉಲ್ಲೇಖ ಪತ್ರ(13)ರಲ್ಲಿ ದಿನಾಂಕ:05-01-2018 ರಂದು ಈ ಕಛೇರಿಯಿಂದ ಪತ್ರ ಬರೆಯಲಾಗಿದೆ.

..5..

ಸದರಿ ಕಟ್ಟಡವನ್ನು ಪ್ರಸ್ತುತ ಜಂಗಲ್ ಲಾಡ್ಜ್ & ರಿಸಾರ್ಟ್ಸ್ ಲಿಮಿಟೆಡ್ ದೇವಭಾಗ ಇವರಿಗೆ ಡಾ: ರವೀಂದ್ರನಾಥ ಠಾಗೋರ್ ಕಡಲ ತೀರಗಳ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿಯಿಂದ ಗುತ್ತಿಗೆ ಆಧಾರದ ಮೇಲೆ ನೀಡಲಾಗಿದ್ದು, ಸದರಿಯವರ ಉಪಯೋಗದಲ್ಲಿ ಇರುತ್ತದೆ.

5. **ಮಯೂರವರ್ಮ ವೇದಿಕೆ ಹಿಂಭಾಗ ಕಟ್ಟಡ:**

ಈ ಹಿಂದೆ ನಿರ್ಮಿಸಿದ್ದ ಮಯೂರವರ್ಮ ವೇದಿಕೆಯ ಹಿಂಭಾಗದಲ್ಲಿ ಕಟ್ಟಡವನ್ನು ನಿರ್ಮಿಸಲಾಗಿದ್ದು ಸದರಿ ಪ್ರದೇಶವು ಸಹ ಕರಾವಳಿ ನಿಯಂತ್ರಣ ವಲಯ-IIರಲ್ಲಿ ಬರುತ್ತಿದ್ದು, ಅಧಿಕೃತ ರಸ್ತೆಯಿಂದ ಸಮುದ್ರದ ಕಡೆ ಬರುತ್ತಿದ್ದು ಯಾವುದೇ ಪೂರ್ವಾನುಮತಿ ಪಡೆದಿರುವುದಿಲ್ಲ.

6. **ತಾತ್ಕಲಿಕ ಮೀನು ಮಾರುಕಟ್ಟೆ:**

ಈ ಹಿಂದೆಯೇ ಕಡಲ ತೀರದ CRZ- II ಪ್ರದೇಶದಲ್ಲಿ ತಾತ್ಕಾಲಿಕ ಮೀನು ಮಾರುಕಟ್ಟೆ ಕಟ್ಟಡವನ್ನು ನಿರ್ಮಿಸಿದ್ದು ಯಾವುದೇ ಪೂರ್ವಾನುಮತಿ ಪಡೆದಿರುವುದಿಲ್ಲ ಕಾರಣ ಸಿ.ಆರ್.ಜೆಡ್. ಅಧಿಸೂಚನೆ ಪ್ಯಾರಾ 8.I.CRZ-I ಮತ್ತು 8.II CRZ II (ii) ರ ಪ್ರಕಾರ ಉಲ್ಲಂಘನೆಯಾಗಿರುತ್ತದೆ.

ಈ ಮೇಲೆ ನಮೂದಿಸಿರುವ ಎಲ್ಲಾ ಕಟ್ಟಡಗಳನ್ನು ಕರಾವಳಿ ನಿಯಂತ್ರಣ ವಲಯ ಪ್ರದೇಶದಲ್ಲಿ ನಿರ್ಮಾಣ ಮಾಡುತ್ತಿದ್ದು, ಯಾವುದೇ ಪೂರ್ವಾನುಮತಿ ಪಡೆಯದೇ ಇರುವುದರಿಂದ ಕರಾವಳಿ ನಿಯಂತ್ರಣ ವಲಯ-2011 ಅಧಿಸೂಚನೆಯ ಸ್ಪಷ್ಟ ಉಲ್ಲಂಘನೆ ಆಗಿರುತ್ತದೆ ಎಂಬ ವರದಿಯನ್ನು ತಮ್ಮ ಅವಗಾಹನೆಗಾಗಿ ಮತ್ತು ಮುಂದಿನ ಸೂಕ್ತ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಿದೆ.

ತಮ್ಮ ವಿಶ್ವಾಸಿ

ಪ್ರಾದೇಶಿಕ ನಿರ್ದೇಶಕರು(ಪರಿಸರ)
ಕಾರವಾರ.

ಅಡಕ: 1) ಉಲ್ಲೇಖ ಪತ್ರ 3,6,7,8 & 11ರ ಪ್ರತಿ
2) CRZ ನಕ್ಷೆ
3) ಕಡಲ ತೀರ ಅಭಿವೃದ್ಧಿ ಮತ್ತು ಸಂರಕ್ಷಣಾ ಸಮಿತಿ ಸಭೆಯ ನಡುವಳಿ ಪ್ರತಿ

**Translated Copy**
**Annexure- II**

**Office of the Regional Director (Env.) (Forest Ecology and Enviroment) Parisara Bhavana, Habbuwada Karwar-581306, E-mail rdekwr2010@gmail.com Phone: 08383-223997**

No: RDE/ CRZ/ R.Violation/2017-18 /66 Date: 26-04-2018

To:
Principal Secretary
(Environment and Ecology)
Dept of Forest, Environment, and Ecology
Bengaluru

Sir,

Sub: Conservation of the endangered Karwar Beach -reg

Ref: : 1) Direction of meeting on Draft CZMP Date: 15-02-2018,
2) Your Office Letter Number: FEE06 CRZ Date: 07/09/2017
3) This Office Notice Letter No.RDE/CRZ/Notice/2017-18/386 Dated 06-06-2017
4) Zilla Nirmiti Kendra Karwar Application dated 14-07-2017,
5) Zilla Nirmiti Kendra, Karwar Application dated 07-02-2018.
